ಕರ್ನಾಟಕ ಸರ್ಕಾರ

# ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001

ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in


ಪತ್ರ ಸಂಖ್ಯೆ: DOF-TECH0ALL2/81/2021, E-502845. ದಿನಾಂಕ:29/06/2021

## ಸುತ್ತೋಲೆ

ವಿಷಯ: 2021-22ನೇ ಸಾಲಿನ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಗುತ್ತಿಗೆ/ಬಿಡ್ ಮೊತ್ತವನ್ನು ಪಾವತಿಸಿ, ಮೀನು ಪಾಶುವಾರು ಹಕ್ಕನ್ನು ನವೀಕರಿಸಿಕೊಳ್ಳಲು ದಿನಾಂಕ ವಿಸ್ತರಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಪಸಂಮೀ /ಇ-62/ಮೀಇಇ 2021, ಬೆಂಗಳೂರು ದಿನಾಂಕ:29/06/2021.

*********

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಕೋವಿಡ್-19 ಕಾರಣದಿಂದಾಗಿ ಲಾಕ್ ಡೌನ್ ವಿಧಿಸಿದ್ದರಿಂದ ಮೀನು ಹಿಡಿದು ವಿಲೇವಾರಿ ಮಾಡಲು ಗುತ್ತಿಗೆದಾರರಿಗೆ ಸಾಧ್ಯವಾಗಿರುವುದಿಲ್ಲ ಎನ್ನುವುದನ್ನು ಮನಗಂಡು ದಿನಾಂಕ:30-06-2021 ಕ್ಕೆ ಮುಕ್ತಾಯವಾಗುತ್ತಿರುವ ಕೆರೆ/ಜಲಾಶಯ/ನದಿಭಾಗಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರು ಅಂತಿಮ ವರ್ಷಕ್ಕೆ ಪಾವತಿಸಿರುವ ಗುತ್ತಿಗೆ ಮೊತ್ತಕ್ಕೆ ನಿಯಮಾನುಸಾರ ಶೇ.5 ರಷ್ಟನ್ನು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ಪಾವತಿಸಿದಲ್ಲಿ ಒಂದು ವರ್ಷದ ಅವಧಿಗೆ ಅಂದರೆ ದಿ:01/07/2021 ರಿಂದ ದಿ:30/06/2022ರವರೆಗೆ ಮೀನು ಪಾಶುವಾರು ಹಕ್ಕನ್ನು ಮುಂದುವರೆಸಲು ಅವಕಾಶ ಕಲ್ಪಿಸಲಾಗಿದೆ. ಆದುದರಿಂದ ದಿನಾಂಕ:30-06-2021 ಕ್ಕೆ ಗುತ್ತಿಗೆ ಅವಧಿ ಮುಕ್ತಾಯವಾಗುವ ಎಲ್ಲಾ ಗುತ್ತಿಗೆ/ಬಿಡ್ ದಾರರು 2021-22ನೇ ಸಾಲಿನ ಇಲಾಖಾ ವ್ಯಾಪ್ತಿಯ ಜಲ ಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ /ಬಿಡ್ ಮೊತ್ತವನ್ನು ದಿನಾಂಕ:15-07-2021 ರವರೆಗೆ ಪಾವತಿಸಿಕೊಂಡು ಮೀನು ಪಾಶುವಾರು ಹಕ್ಕನ್ನು ನವೀಕರಿಸಿಕೊಳ್ಳಲು ಅನುಮತಿ ನೀಡಿದೆ.

ಮೀನುಗಾರಿಕೆ ನಿರ್ದೇಶಕರು

29/6/21

ಗೆ:

ಎಲ್ಲಾ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರುಗಳು,

ಎಲ್ಲಾ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,

ಎಲ್ಲಾ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,

ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಸಂಕಲನಕ್ಕೆ ಮಾಹಿತಿಗಾಗಿ.

ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ (2) ದಾಸ್ತಾನು ಕಡತಕ್ಕೆ.